ಕಚೇರಿಯಲ್ಲಿ ಹಳ್ಳಿಯ ಒಡನಾಟ ಇರುವ ಸಹೋದ್ಯೋಗಿಗಳಿಗೆ ತೋರಿಸಿ, 'ಇಂತಹ ಬೀಜ ನಿಮ್ಮ ಊರ ಕಡೆ ಇದೆಯೇ?' ಎಂದು ಕೇಳಿದೆ.

ಬೀಜದ ರೂಪಕ್ಕೆ ಎಲ್ಲರೂ ಮೆಚ್ಚುಗೆ ಸೂಸಿದರೇ ವಿನಃ ಯಾರಿಗೂ ಇದರ ಮಾಹಿತಿ ಇರಲಿಲ್ಲ. ಆದರೂ ನನ್ನ ಪರ್ಸಿನಲ್ಲಿ ಹಳೇ ಬೀಜಗಳನ್ನು ಇಟ್ಟುಕೊಂಡು ಆಗಾಗ ಅನುಮಾನ ಬಂದವರಿಗೆ ತೋರಿಸಿ ಪ್ರಶ್ನಿಸುತ್ತಿದ್ದೆ. ಹೀಗೊಮ್ಮೆ ಸಹೋದ್ಯೋಗಿ ಬಾಲಚಂದ್ರ ದಾಮ್ಲೆಯವರಿಗೆ ತೋರಿಸಿ ಪ್ರಶ್ನಿಸಿದಾಗ ಅವರು, 'ಓ! ಇದಾ... ಮಂಜೊಟ್ಟೆ, ನಮ್ಮ ಅರಿಸಿನಮಕ್ಕಿಯಲ್ಲಿ (ದ.ಕ.ಜಿಲ್ಲೆ) ಇದರ ಮರವಿದೆ' ಎಂದರು. ಗೆದ್ದೆನೆಂದು ಖುಷಿಪಡಲು ಮತ್ತೇನು ಬೇಕು? ಮುಂದಿನ ಕೆಲವು ದಿನಗಳಲ್ಲಿ ಅರಿಸಿನಮಕ್ಕಿಯ ಮಂಜೊಟ್ಟೆ ಬೀಜಗಳು ನನ್ನ ಕೈ ಸೇರಿದವು.

ಮಂಜೊಟ್ಟೆಯ ವೈಜ್ಞಾನಿಕ ಹೆಸರು **Adenanthera Pavonina.** ಇದರ ರಕ್ತ ಕೆಂಪು ಬೀಜದ ಕಾರಣ ರಕ್ತಚಂದನ ಅಥವಾ **Red Sandalwood** ಎಂದು ತಪ್ಪಾಗಿ ಗುರುತಿಸುವುದುಂಟು. ಆದರೆ ರಕ್ತಚಂದನಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ. ತೆಳುವಾದ ಹಂದರದ ಮರ. ನುಗ್ಗೆ ಎಲೆಯನ್ನು ಹೋಲುವ ಎಲೆಗಳು. ಕಾಯಿ ಒಣಗಿದಾಗ ಕವಚ ಸುರುಳಿಯಾಗಿ ತಿರುಚಿಕೊಂಡು ಬೀಜ ದೂರ ಸಿಡಿಯುತ್ತದೆ.

ಗುಲಗಂಜಿ ಎಂಬ ಕಪ್ಪು ಚುಕ್ಕೆ ಇದ್ದ ಕೆಂಪು ಹೊಳಪಿನ ಬೀಜಗಳನ್ನು, ಚಿನ್ನ ತೂಗಲು ಬಳಸುತ್ತಿದ್ದದ್ದು ಅನೇಕರಿಗೆ ನೆನಪಿರಬಹುದು. ಆದರೆ ಮಂಜೊಟ್ಟೆ ಪೂರ್ತಿ ಕೆಂಪಗಿದ್ದು, ವಿಭಿನ್ನವಾಗಿದೆ. ಚಿನ್ನ ತೂಗಲು ಇದನ್ನೂ ಬಳಸುತ್ತಿದ್ದರಿಂದ 'ಆನೆ ಗುಲಗಂಜಿ' ಎಂಬ ಹೆಸರೂ ಇದೆ. ವಾಸ್ತವವಾಗಿ ತೂಗಿ ನೋಡಿದಾಗ ನಾಲ್ಕು ಬೀಜಗಳು ಒಂದು ಗ್ರಾಮಿನ ಅಂದಾಜು ತೂಗುತ್ತದೆಯೇ ವಿನಃ ಕರಾರುವಾಕ್ಕಾಗಿ ಒಂದೇ ತೂಕ ಇರುವುದಿಲ್ಲ. ಒಂದೇ ಗ್ರಾಂ ತೂಗಲು ನಾನು ಅನೇಕ ಬೀಜ ತುಲನೆಯ ಸಂಯೋಜನೆ ಮಾಡಬೇಕಾಯಿತು.

ಆಕರ್ಷಕ ಬೀಜಗಳು ಅಳುಗುಳಿಮನೆ ಆಡಲು ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ವಿವಿಧೆಡೆ ಬಳಕೆಯಾಗುತ್ತಿತ್ತು. ಹವಳಕ್ಕಿಂತ ಕೆಂಪು ಹೊಳಪಿನ ಕಾರಣ ಆಭರಣವಾಗಿ ಕೂಡ ಬಳಕೆಯಾಗುತ್ತದೆ. ನಾಟಾ ಗಡುಸಾಗಿದ್ದು ದೋಣಿ ತಯಾರಿಕೆಗೆ ಬಳಸುತ್ತಿದ್ದರಂತೆ.



ಮಂಜೊಟ್ಟೆ ಮಲೆನಾಡಿನ ಕಡೆ ನೋಡಿಲ್ಲವಾದರೂ, ಮೈಸೂರು ಗ್ರಾಮಾಂತರದಲ್ಲೂ, ಬೆಂಗಳೂರಿನ ಕೆಲವೆಡೆ ಕೂಡ ಈ ಮರಗಳನ್ನು ನೋಡಿದ್ದೇನೆ. ಉಷ್ಣವಲಯದಾದ್ಯಂತ ಬೆಳೆಯುವ ಮರ. ತೀರಾ ಇತ್ತೀಚೆಗೆ ಬಿಬಿಎಂಪಿ ಉದ್ಯಾನವನದ ಕಾಂಪೌಂಡ್ ಕಟ್ಟಲು ಕೋರಮಂಗಲದಲ್ಲಿ ದೊಡ್ಡ ಮಂಜೊಟ್ಟೆ ಮರ ಬಲಿಯಾಯಿತು. ಮರ ಎಂದರೆ ಅಭಿವೃದ್ಧಿಗೆ ಅಡಚಣೆ ಎನ್ನುವ ಕಾಲದಲ್ಲಿ ಗಮನಕ್ಕೆ ಬಾರದೆ ಅನೇಕ ಮರಗಳು ಕಣ್ಮರೆಯಾಗುತ್ತವೆ.

ಅರಿಸಿನಮಕ್ಕಿಯ ಮಂಜೊಟ್ಟೆ ಬೀಜಗಳು ಸಸಿಯಾಗಿ, ನಮ್ಮ ವೃತ್ತ ಕಚೇರಿಯಲ್ಲಿ ಬೆಳೆದು ನಿಂತಿದೆ. ನಮ್ಮ ತೋಟದಲ್ಲೂ ದೊಡ್ಡ ಮರವಾಗಿ ಬೊಗಸೆ ತುಂಬುವಷ್ಟು ಬೀಜಗಳನ್ನು ಸುರಿಸುತ್ತಿದೆ. ಬಂಗಾರದ ತುಲನೆಗೆ ಬಳಕೆಯಾದ ಮಂಜೊಟ್ಟೆಯಂತಹ ಅನೇಕ ಮರಗಳು ಕೂಡ ಬಂಗಾರದ ಮೌಲ್ಯವೇ ಎಂದರಿತು ಬೆಳೆಸಿದರೆ ನಮ್ಮ ಮಕ್ಕಳೂ ತಮ್ಮ ಖಜಾನೆಯನ್ನು ಕೆಂಪು ಹೊಳಪಿನಿಂದ ವೃದ್ಧಿಸಬಹುದು.

ಪ್ರತಿಕ್ರಿಯಿಸಿ: **feedback@sudha.co.in**


